**ನವಂಬರ್ 08, 2016**

# ₹ 2000 ರ ನೀಡಿಕೆ

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ. ಊರ್ಜಿತ್ ಆರ್ ಅವರ ಸಹಿಯುಳ್ಳ, ಬ್ಯಾಂಕು ನೋಟಿನ ಹಿಂದೆ ಮುದ್ರಣ ವರ್ಷ 2016 ಮುದ್ರಿಸಿರುವ, ಯಾವುದೇ ಒಳಾಕ್ಷರ ಇಲ್ಲದಿರುವ , ಮಹಾತ್ಮಾ ಗಾಂಧಿ ಶ್ರೇಣಿ (ನೂತನ) -2005 ರ, ₹2000 ರ ಬ್ಯಾಂಕು ನೋಟುಗಳನ್ನು ಶ್ರೀಘ್ರದಲ್ಲಿಯೇ ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಲಿದೆ. ಹೊಸ ಮುಖಬೆಲೆಯ ನೋಟಿನ ಹಿಂಭಾಗದಲ್ಲಿ ದೇಶದ ಮೊದಲ ಅಂತರತಾರಾ ಬಾಹ್ಯಾಕಾಶದ ಪ್ರಯಾಣದ ಸಂಕೇತವಾದ ಮಂಗಳಯಾನದ ಚಿತ್ರವಿದೆ. ನೋಟಿನ ಬಣ್ಣ ಕೆನ್ನೇರಳೆ ಆಗಿದೆ. ಈ ನೋಟು ತನ್ನ ಹಿಂಭಾಗ ಮತ್ತು ಮುಂಭಾಗದಲ್ಲಿ ಇತರೆ ವಿನ್ಯಾಸ ಮತ್ತು ಜ್ಯಾಮಿತಿಯ ಮಾದರಿಗಳನ್ನು ಒಟ್ಟಾರೆ ಬಣ್ಣದೊಂದಿಗೆ ಹೊಂದಿದೆ.







ನೋಟಿನ ಇತರೆ ವೈಶಿಷ್ಟಗಳು ಈ ಕೆಳಗಿನಂತಿವೆ :

**ಮುಂಭಾಗ**

1. ಪಾರದರ್ಶಕ ನೋಂದಣಿಯ ಮುಖಬೆಲೆ ಸಂಖ್ಯೆ 2000
2. ಮುಖಬೆಲೆ ಸಂಖ್ಯೆ 2000 ದೊಂದಿಗೆ ಗುಪ್ತ ಚಿತ್ರ
3. ದೇವನಾಗರಿಯಲ್ಲಿ ಮುಖಬೆಲೆ ಸಂಖ್ಯೆ 2000
4. ನೋಟಿನ ಕೇಂದ್ರದಲ್ಲಿ ಮಹಾತ್ಮ ಗಾಂಧಿಯವರ ಭಾವಚಿತ್ರ

5. ನೋಟಿನ ಎಡಭಾಗದಲ್ಲಿ ಅತಿ ಸಣ್ಣ ಅಕ್ಷರಗಳಲ್ಲಿ “ಆರ್ ಬಿ ಐ “ ಮತ್ತು “2000” ಎಂದು ಬರೆದಿದೆ.
6. ಬಣ್ಣ ಬದಲಾವಣೆಯ ಜೊತೆಗೆ “‘भारत’ , “ಆರ್ ಬಿ ಐ “ ಮತ್ತು 2000 ಎಂದು ರಂಧ್ರಗಳಿರುವ ಭದ್ರತಾ ಎಳೆಯ ಮೇಲೆ ಬರೆದಿಡಲಾಗಿದೆ. ನೋಟನ್ನು ಬಾಗಿಸಿದಾಗ ಭದ್ರತಾ ಎಳೆಯೂ ಹಸಿರು ಬಣ್ಣದಿಂದ ನೀಲಿ ಬಣ್ಣಕ್ಕೆ ಬದಲಾವಣೆ ಆಗುತ್ತದೆ.
7. ಖಾತರಿ ವಾಖ್ಯಾಂಶ , ಗವರ್ನರ್ ಸಹಿಯೊಂದಿಗೆ ವಚನ ವಾಖ್ಯಾಂಶ ಮತ್ತು ರಿಸರ್ವ್ ಬ್ಯಾಂಕ್ ಮುದ್ರೆ ನೋಟಿನ ಬಲಭಾಗದಲ್ಲಿದೆ.
8. ಮುಖಬೆಲೆಯ ಸಂಖ್ಯೆ ₹2000 ರೂಪಾಯಿ ಚಿನ್ಹೆಯೊಂದಿಗೆ ವರ್ಣ ಬದಲಾವಣೆಯ ಶಾಹಿಯೊಂದಿಗೆ (ಹಸಿರು ಬಣ್ಣದಿಂದ ನೀಲಿ ) ನೋಟಿನ ಕೆಳಗಡೆ ಬಲಭಾಗದಲ್ಲಿದೆ.
9. ಬಲಭಾಗದಲ್ಲಿ ಅಶೋಕ ಸ್ಥಂಭ ಲಾಂಛನ, ಮಹಾತ್ಮ ಗಾಂಧಿ ಚಿತ್ರ ಮತ್ತು ವಿದ್ಯುದಚ್ಚಿನ (2000) ಜಲಗುರುತು.
10. ಸಂಖ್ಯಾಕಣದಲ್ಲಿರುವ ಸಂಖ್ಯೆಗಳ ಗಾತ್ರ ಎಡದಿಂದ ಬಲಕ್ಕೆ ಆರೋಹಣ ಮಾದರಿಯಲ್ಲಿ ನೋಟಿನ ಮೇಲಿನ ಎಡಭಾಗದಲ್ಲಿ ಹಾಗೂ ಕೆಳಗಿನ ಬಲಭಾಗದಲ್ಲಿ ಇರುತ್ತದೆ .

## ದೃಷ್ಟಿ ಹೀನರಿಗಾಗಿ

ಉಬ್ಬು ಮುದ್ರಣ , ಅಶೋಕ ಸ್ಥಂಭ ಲಾಂಛನ , ಬ್ಲಿಡ್ ರೇಖೆ ಮತ್ತು ಗುರುತು ಚಿನ್ಹೆ

11. ಬಲಭಾಗದಲ್ಲಿ ಸಮತಲ ಆಯತಾಕಾರದ ಚಿನ್ಹೆ ₹2000 ಉಬ್ಬು ಮುದ್ರಣದಲ್ಲಿರುತ್ತದೆ.
12. ಏಳು ಕೊನೀಯ ಬ್ಲಿಡ್ ರೇಖೆಗಳು ಎಡ ಮತ್ತು ಬಲಭಾಗದಲ್ಲಿ ಉಬ್ಬು ಮುದ್ರಣದಲ್ಲಿರುತ್ತದೆ.

**ಹಿಂಭಾಗ**

13. ಎಡಭಾಗದಲ್ಲಿ ಮುದ್ರಣ ವರ್ಷ
14. ಘೋಷಣೆಯೊಂದಿಗೆ “ಸ್ವಚ್ಛ್ ಭಾರತ್ “ ಚಿನ್ಹೆ
15. ಮಧ್ಯಭಾಗದಲ್ಲಿ ಭಾಷಾ ಫಲಕ
16. ಮಂಗಲಯಾನದ ಸಾಂಕೇತಿಕ ಚಿತ್ರ
17. ದೇವನಾಗರಿಯಲ್ಲಿ ಮುಖಬೆಲೆ ಸಂಖ್ಯೆ 2000

ಬ್ಯಾಂಕ್ ನೋಟಿನ ಆಯಾಮ 66 ಮಿಮೀ * 166 ಮಿಮೀ

ಪತ್ರಿಕಾ ಪ್ರಕಟಣೆ : 2016-2017/1144

ಅಲ್ಪನ ಕಿಲಾವಲ
ಮುಖ್ಯ ಸಲಹೆಗಾರರು